ಉಪಾಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಸೂಚನೆ ಕೊಟ್ಟಂತೆ ಶ್ರೀ ಸೋಮಣ್ಣನವರು ಆ ಕ್ಷೇತ್ರಕ್ಕೆ ಭೇಟಿ ಕೊಟ್ಟು, ಯಾವ ರೀತಿಯ ಪರಿಹಾರ ಮಾಡಬೇಕೆಂದು ನೋಡಿ.

ಶ್ರೀ ವಿ. ಸೋಮಣ್ಣ : ಆಯಿತು.

ಶ್ರೀ ಸಿದ್ದರಾಮಯ್ಯ : ಶ್ರೀ ಸೋಮಣ್ಣನವರೇ ನರೇಂದ್ರಬಾಬು ರವರೊಂದಿಗೆ ಹೋಗಿ ಪರಿಶೀಲನೆ ಮಾಡಿ, ಆ ಜಾಗದಲ್ಲಿ ಏನು ಪರಿಹಾರ ಮಾಡಬೇಕೋ ಮಾಡಿಕೊಡಿ.

ಉಪಾಧ್ಯಕ್ಷರು : ನರೇಂದ್ರಬಾಬುರವರೇ ನೀವು ಶೂನ್ಯ ವೇಳೆಯಲ್ಲಿ ಮಾತನಾಡುತ್ತಿದ್ದೀರಿ. ಹೆಚ್ಚಿನ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಇಲ್ಲಿ ಹೆಚ್ಚು ಚರ್ಚೆ ಬೇಡ. ತಮ್ಮ ನೋವನ್ನು ಹೇಳಿದ್ದೀರಿ. ಶ್ರೀ ಸೋಮಣ್ಣನವರು ನಿಮ್ಮ ಕ್ಷೇತ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ ಪರಿಹಾರದ ಬಗ್ಗೆ ನೋಡುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀವೂ ಜೊತೆಯಲ್ಲಿ ಹೋಗಿ, visit ನಂತರ ಮನೆ ಕಟ್ಟುವುದಕ್ಕೆ ಏನು ಮಾಡಬೇಕೋ ತೀರ್ಮಾನ ಮಾಡಿ.

(4) ವಿಷಯ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಆದ ಹಾನಿಗೆ ಹೆಚ್ಚು ಹಣ ಕೊಡುವ ಬಗ್ಗೆ.

ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಸನ್ಮಾನ್ಯ ಉಪಾಧ್ಯಕ್ಷರೇ, ಮಲೆನಾಡು ಭಾಗದಲ್ಲಿ ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬಹಳಷ್ಟು ಹಾನಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಪ್ರಕೃತಿ ವಿಕೋಪದಡಿಯಲ್ಲಿ ಪ್ರತಿ ವರ್ಷವೂ ಸಹ ಮಳೆ ಹಾನಿಗೆ ವಿಶೇಷವಾದ ಹಣವನ್ನು ಸರ್ಕಾರ ಕೊಡುತ್ತಿತ್ತು. ಈ ಬಾರಿಯು ಕೊಟ್ಟಿದೆ. ಆದರೆ ಕಳೆದ ಸಲ ಕೊಟ್ಟಿರುವುದಕ್ಕಿಂತ ಒಂದೊಂದು ಕ್ಷೇತ್ರಕ್ಕೆ ರೂ.15.00 ಲಕ್ಷಗಳನ್ನು ಪ್ರಕೃತಿ ವಿಕೋಪದ ಹಾನಿಯನ್ನು ಸರಿಪಡಿಸುವುದಕ್ಕೆ ನೀಡಿದೆ. ಇದು ಏನೇನೂ ಸಾಕಾಗುವುದಿಲ್ಲ. ಈ ವಿಷಯ ತಮಗೂ ಗೊತ್ತಿದೆ. ಬಹಳಷ್ಟು ವರ್ಷಗಳಿಂದ, ಈ ಬಾರಿಯಂತೂ ಮಳೆ ಹೆಚ್ಚು ಬಿದ್ದಿದ್ದು, ನಮ್ಮ ಭಾಗದಲ್ಲಿ ಬಹಳಷ್ಟು ಹಾನಿಯಾಗಿದೆ. ಆದರೆ, ಪ್ರಕೃತಿ ವಿಕೋಪದಡಿ ಒಂದು ಕ್ಷೇತ್ರಕ್ಕೆ ರೂ.15.00 ಲಕ್ಷ ಸಾಕಾಗುವುದಿಲ್ಲ. ತಾವು ಆ ಭಾಗದವರೇ ಆಗಿರುವುದರಿಂದ ತಮಗೂ ಗೊತ್ತಿದೆ. ಬಹುಶಃ ಈ ಹಾನಿಗೆ ಇನ್ನೂ ಹೆಚ್ಚಿಗೆ ಹಣವನ್ನು ನಿಗದಿ ಮಾಡಿ, ಈ ಪ್ರಕೃತಿ ವಿಕೋಪದಿಂದ, ಅತಿವೃಷ್ಟಿಯಿಂದ

ಆದ ಹಾನಿಗೆ ಸರ್ಕಾರ ಇನ್ನೂ ಹೆಚ್ಚಿನ ಹಣ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು : ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಯೇ?

ಶ್ರೀ ಸುರೇಶ್ ಕುಮಾರ್. ಎಸ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೇ, ಮುಖ್ಯಮಂತ್ರಿಗಳು ನಂತರ ಉತ್ತರ ನೀಡುವುದಾಗಿ ಹೇಳಿದ್ದಾರೆ.

(5) ವಿಷಯ : ಕಾರವಾರದಲ್ಲಿ ಕೈಗಾ ಅಣು ಸ್ಥಾವರದ ವಿಕಿರಣದಿಂದ ಆಗಿರುವ ತೊಂದರೆ ಬಗ್ಗೆ.

ಶ್ರೀ ಸುನೀಲ್ ವಿ.ಹೆಗಡೆ (ಹಳಿಯಾಳ) : ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ಜಿಲ್ಲೆಯ ಕಾರವಾರ ಮತ ಕ್ಷೇತ್ರದಲ್ಲಿ ಕೈಗಾ ಅಣು ಸ್ಥಾವರ ಪ್ರಾರಂಭವಾಗಿ ಸುಮಾರು 15–20 ವರ್ಷಗಳಾಗಿದೆ. ಕೈಗಾದಲ್ಲಿ ಮೊದಲು ಸ್ಥಾವರ ನಿರ್ಮಾಣ ಮಾಡಬೇಕಾದರೆ ಒಂದು zone ಅಂತ ready ಮಾಡಿದರು. ಅಲ್ಲಿಂದ ಹೊರಗಡೆ 5 ಕಿ.ಮೀ. ಸುರಕ್ಷತಾ ವಲಯವೆಂದು ಮಾಡಿಕೊಂಡು, ಆ ಸುರಕ್ಷತಾ ವಲಯದಲ್ಲಿ ಬರುವಂಥ ಯಾವುದೇ ಗ್ರಾಮಗಳಲ್ಲಿ, ಯಾವುದೇ ರೀತಿಯ ಅಭಿವೃದ್ಧಿ ಮಾಡುವುದಕ್ಕೆ ಅನುಮತಿ ಕೊಡಬಾರದೆಂದು ಅಂದಿನ ಕೈಗಾ ಅಧಿಕಾರಿಗಳು ಬರೆದಿದ್ದರು. ಈ ಹಿಂದೆ 2–3 ಬಾರಿ ಜಿಲ್ಲಾ ಉಸ್ತುವಾರಿ ಸಚಿವರು, ಮಾಜಿ ಸಚಿವರ ಸಭೆಯಲ್ಲಿ ನಿರ್ಣಯವಾದಂತೆ ಅಲ್ಲಿ ವಾಸಿಸುವ ಜನರಿಗೆ ಸುರಕ್ಷತಾ ವಲಯದಿಂದ ಹೊರಗಡೆ ತೆಗೆದುಕೊಂಡು ಹೋಗಿ ಅಲ್ಲಿ ಅಭಿವೃದ್ಧಿ ಕಾರ್ಯ ಮಾಡಬೇಕು ಎಂದು ಆಗಿತ್ತು. ಈಗ ಏನಾಗಿದೆಯೆಂದರೆ, ಮೊನ್ನೆ ಕೈಗಾದಲ್ಲಿ ವಿಕಿರಣದಿಂದ ಒಂದು death ಆದ ಮೇಲೆ ಅಲ್ಲಿನ ಜನರಿಗೆ ಭಯ ಹುಟ್ಟಿದೆ. ಅಲ್ಲಿ ಗೋವುಗಳಿಗೆ ರೋಗ ಬರುತ್ತಿದೆ, ವಿಕಿರಣದಿಂದ ಮಕ್ಕಳಿಗೆ ರೋಗ ಬರುತ್ತಿದೆ, ಅಲ್ಲಿ ಬೆಳೆ ಬರುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ 5 ಕಿ.ಮೀ. zone ನಲ್ಲಿ ಜನ ನಮ್ಮನ್ನು ಬೇರೆ ಕಡೆಗೆ shift ಮಾಡಿ ಎಂದು 10–12 ದಿವಸಗಳಿಂದ strike ಮಾಡುತ್ತಿದ್ದಾರೆ. ಆದರೆ, ಇವತ್ತಿನವರೆಗೆ ಸರ್ಕಾರದಿಂದ ಯಾವುದೇ ರೀತಿಯ ಆಶ್ವಾಸನೆ ಸಿಗುತ್ತಿಲ್ಲ. ಈಗ ಕೈಗಾದವರು ಅಲ್ಲಿ ಅಭಿವೃದ್ಧಿ ಮಾಡುವುದಕ್ಕೆ ರೂ.250.00 ಕೋಟಿಗಳನ್ನು ಹಾಕುತ್ತೇವೆಂದು ಹೇಳುತ್ತಿದ್ದಾರೆ. ಆದರೆ ಅಲ್ಲಿನ ಜನ ಅಭಿವೃದ್ಧಿಪಡಿಸುವುದು ಬೇಡ ಎಂದು ಹೇಳುತ್ತಿದ್ದಾರೆ. ಕೈಗಾದಲ್ಲಿ ಕೆಲಸ